ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಮಹಾರಾಷ್ಟ್ರ ಕೋಯಿನಾ ಅಣೆಕಟ್ಟೆನಿಂದ ಒಳ ಹರಿವಿನ ಪ್ರವಾಹದ ಬಗ್ಗೆ

ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶನ ಹೊಂದಿದವರು) –

512 (481) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಹಾರಾಷ್ಟ್ರ ಕೋಯಿನಾ ಅಣೆಕಟ್ಟೆನಿಂದ ಹಾಗೂ ಇತರೆ ಯಾವ ಮೂಲಗಳಿಂದ ಕೃಷ್ಣ ನದಿಗೆ ನೀರು ಬರುತ್ತಿದೆ; ಕಳೆದ 3 ವರ್ಷಗಳಿಂದ ಬಿಡುಗಡೆಯಾದ ನೀರಿನ ಪ್ರಮಾಣ ಎಷ್ಟು; ಒಳ ಹರಿವಿನ ಪ್ರಮಾಣ ಎಷ್ಟು;

(ಆ) ಬಿಡುಗಡೆಯಾದ ನೀರಿನಿಂದ ಪ್ರವಾಹಕ್ಕೆ ಮುಳಗಡೆಯಾಗಿ ಹಾನಿಗೊಳಗಾದ ಹಳ್ಳಿಗಳು ಹಾಗೂ ಭೂ ಪ್ರದೇಶಗಳೆಷ್ಟು; (ವಿವರ ನೀಡುವುದು)

(ಇ) ವಿಜಯಪುರ ಜಿಲ್ಲೆಯ ಯಾವ ಯಾವ ಪ್ರದೇಶಗಳು ಮುಳಗಡೆಯಾಗುತ್ತವೆ; (ವಿವರ ನೀಡುವುದು)

(ಈ) ಸಂತ್ರಸ್ತರಿಗೆ ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು; ಕೇಂದ್ರ ಸರ್ಕಾರದಿಂದ ಯಾವುದಾದರೂ ಟೀಮ್ ಬಂದಿದೆಯೇ? (ವಿವರ ನೀಡುವುದು)